**ದಿನಾಂಕಃ 05-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಪಿ., ಆರೋಪಿ ಪರ ವಕೀಲರಿಂದಃ**

**6.** 2019 ನೇ ಇಸ್ವಿಯಲ್ಲಿ ನನ್ನ ಮನೆ ಬಿದ್ದಿದ್ದು, ಸರ್ಕಾರದಿಂದ ಹಣ ಪಡೆದು ಆ ಮನೆಯನ್ನು ಕಟ್ಟಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಹಾಜರಪಡಿಸುತ್ತೇನೆ. ನಿಮ್ಮ ಸ್ವಂತಕ್ಕೆ ಇರುವ ಜಮೀನಿನ ಕಾಗದ ಪತ್ರಗಳನ್ನು ಹಾಜರಪಡಿಸಲು ನಿಮಗೆ ತೊಂದರೆ ಇರುವುದಿಲ್ಲ ಅಂದರೆ ಹಾಜರಪಡಿಸುತ್ತೇನೆ. ನನ್ನ ಕುಟುಂಬಕ್ಕೆ ಇರುವ ಪಡಿತರ ಚೀಟಿ ದಾಖಲೆಯನ್ನು ಹಾಜರಪಡಿಸಬಹುದು ಅಂದರೆ ಹಾಜರಪಡಿಸುತ್ತೇನೆ. ಆರೋಪಿ ನಿಮ್ಮಿಂದ ಹಣ ಪಡೆದು ಹಲವಾರು ಬಾರಿ ಹಣ ವಾಪಸ್ಸು ಕೊಡುವಂತೆ ಕೇಳಿದ್ದು, ಅದು ಯಾವ್ಯಾವ ದಿನಾಂಕ, ವರ್ಷ, ಅಂತಾ ನಿಖರವಾಗಿ ಹೇಳಲಾಗುತ್ತದೆ ಅಂದರೆ ಹೇಳಲು ಆಗುವುದಿಲ್ಲ. ಆರೋಪಿಗೆ ನೀವು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ, ಆದ್ದರಿಂದ ನೀವು ಹಣವನ್ನು ಕೇಳಿರುವುದಿಲ್ಲ ಅಂದರೆ ಸರಿಯಲ್ಲ.

**7.** ದಿನಾಂಕಃ 25-06-2020 ರಂದು ನೀವು ಆರೋಪಿಗೆ ಹೋಗಿ ಹಣವನ್ನು ಕೇಳಿರುವುದಿಲ್ಲ ಅಂದರೆ ಸರಿಯಲ್ಲ. 2020 ನೇ ಮಾರ್ಚ ತಿಂಗಳ ಕೊನೆಯದಿಂದ ಡಿಸೆಂಬರ 2020 ತಿಂಗಳ ಅಂತ್ಯದವರೆಗೆ ಲಾಕಡೌನ ಇತ್ತು ಅಂದರೆ ಇತ್ತು. ಆ ಸಮಯದಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ಬಂದು ಮಾಡಲು ಅವಕಾಶ ಇರಲಿಲ್ಲ ಅಂದರೆ ಸಾಕ್ಷಿ ನನ್ನ ಮಗನ ಬೈಕ್ ಮೇಲೆ ಹೋಗಿ ಕೇಳಿರುತ್ತೇನೆ. ಆ ಸಮಯದಲ್ಲಿ ಬಟ್ಟೆ ಅಂಗಡಿಗಳು ಮುಚ್ಚಿದ್ದು, ಅವಶ್ಯಕ ವಸ್ತುಗಳ ಅಂಗಡಿಗಳು ಮಾತ್ರ ಇತ್ತು ಅಂದರೆ ಸರಿಯಲ್ಲ. ಆರೋಪಿಗೆ ಹೋಗಿ ನೀವು ಹಣವನ್ನು ಕೇಳಿರುತ್ತೀರಾ ಅಂತಾ ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿ ನಿಮಗೆ ಯಾವ ದಿನಾಂಕದಂದು ಹಣ ಕೇಳಿರುತ್ತಾರೆ

ಅಂತಾ ನಿಖರವಾಗಿ ಹೇಳಲು ಆಗುತ್ತದೆಯಾ ಅಂದರೆ ಸಾಕ್ಷಿ ಜೂನ್ ತಿಂಗಳ 2017-2018 ನೇ ಇಸ್ವಿಯಲ್ಲಿ ಆರೋಪಿಗೆ ಹಣ ಕೊಟ್ಟಿರುತ್ತೇನೆ. ನೀವು ಹೇಳಿದಂತೆ ಆರೋಪಿಗೆ ಜೂನ್ 2017-2018 ನೇ ಇಸ್ವಿಯಲ್ಲಿ ಹಣ ಕೊಟ್ಟಿರುತ್ತೇನೆ ಅಂತಾ ನಿಮ್ಮ ದೂರಿನಲ್ಲಿ ತೋರಿಸಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿಗೆ ಹಣವನ್ನು ಎಷ್ಟು ಮುಖಬೆಲೆಯ ಹಣವನು ನೀಡಿರುತ್ತೀರಿ ಅಂದರೆ ರೂ. 500/- ಮುಖಬೆಲೆಯ ಹಣವನ್ನು ನೀಡಿರುತ್ತೇನೆ. ಆರೋಪಿ ಚೆಕ್ ಕೊಟ್ಟಿದ್ದು, ಅದನ್ನು ಯಾವ ದಿನಾಂಕದಂದು ನಗಧೀಕರಣಕ್ಕೆ ಹಾಕಿದ್ದೀರಾ ಅಂದರೆ ಅದು ಗಮನಕ್ಕೆ ಇರುವುದಿಲ್ಲ. ಆರೋಪಿಗೆ ಯಾವ ದಿನಾಂಕದಂದು ನೋಟಿಸ್ ಕೊಟ್ಟಿರುತ್ತೀರಿ ಅಂದರೆ ಲಕ್ಷ್ಯ ಇರುವುದಿಲ್ಲ.ನೀವು ನೀಡಿರುವ ನೋಟಿಸ್ ಆರೋಪಿಗೆ ಯಾವ ದಿನಾಂಕದಂದು ಜಾರಿಯಾಗಿರುತ್ತದೆ ಅಂದರೆ ಅದು ಗಮನಕ್ಕೆ ಇರುವುದಿಲ್ಲ.

**8.** ನಿಪಿ-3 ಲೀಗಲ್ ನೋಟಿಸ್‌ನಲ್ಲಿ ಆರೋಪಿ ನನಗೆ ಚೆಕ್ ಸಂಖ್ಯೆಃ 003989 ನೇ ಚೆಕ್‌ನ್ನು ನೀಡಿರುತ್ತೀರಾ ಅಂತಾ ಬರೆಸಿರುತ್ತೀರಿ ಅಂದರೆ ಬರೆಸಿರುವುದಿಲ್ಲ. ನಿಮ್ಮ ದೂರಿನಲ್ಲಿ ಚೆಕ್ ನಂ. 003989 ಅಂತಾ ಹೇಳಿ ಬರೆಸಿರುತ್ತೀರಾ ಅಂದರೆ ನಾನು ಬರೆಸಿರುವುದಿಲ್ಲ. ನಿಪಿ-1 ರ ಚೆಕ್ ನಂ. 000033 ಚೆಕ್‌ಗೆ ಸಂಬಂಧಿಸಿದಂತೆ ನೀವು ಯಾವುದೇ ಲೀಗಲ್ ನೋಟಿಸ್ ನೀಡಿಲ್ಲ, ದೂರನ್ನು ದಾಖಲು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-2 ಬ್ಯಾಂಕ್‌ನವರು ನೀಡಿದ ಹಿಂಬರಹಕ್ಕೆ ಸಂಬಂಧಿಸಿದಂತೆ ನೀವು ಆರೋಪಿಗೆ ನೋಟಿಸ್‌ನ್ನು ನೀಡಿರುವುದಿಲ್ಲ ಹಾಗೂ ದೂರನ್ನು ದಾಖಲು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-1 ರ ಚೆಕ್‌ನಲ್ಲಿ ಸಹಿ ಮಾಡಿದ ಇಂಕ್, ಬರವಣಿಗೆಯ ಇಂಕ್ ಬೇರೆ ಬೇರೆ ಇರುತ್ತದೆ ಅಂದರೆ ಸಾಕ್ಷಿ ಆರೋಪಿ ಏನೂ ಕೊಟ್ಟಿರುತ್ತಾರೆ

ಆದನ್ನೇ ಕೊಟ್ಟಿರುತ್ತೇನೆ ಅಂತಾ ಹೇಳುತ್ತಾರೆ. ನಿಪಿ-1 ರ ಚೆಕ್‌ನ್ನು ತಜ್ಞರ ಹೇಳಿಕೆ ಪಡೆಯಲು ನಿಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 05-09-2024.**
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.